ದಿನಾಂಕಃ **03.06.2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಿಂದಃ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯ ವಾಗಿರುತ್ತವೆ.

**1.**ಪ್ರತಿವಾದಿ ನನಗೆ ಬರೆದುಕೊಟ್ಟಿರುವ ಕ್ರಯದ ಕರಾರು ಪತ್ರವನ್ನು ಹಾಜರು ಮಾಡಿದ್ದು ಅದನ್ನು ನಿಪಿ **1** ಎಂದು ಗುರುತಿಸಲಾಯಿತು. ನಿಪಿ **1** ಕ್ಕೆ ಪ್ರತಿವಾದಿ ಸಹಿ ಮಾಡಿದ್ದು ಅದನ್ನು ನೋಡುತ್ತಿದ್ದು ಅದನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು.

**2.** ನಿಪಿ **1** ಕ್ಕೆ ಮಂಜೇಶ ಮತ್ತು ಮಹದೇವರವರು ಸಾಕ್ಷಿಗಳಾಗಿ ಸಹಿ ಮಾಡಿದ್ದು, ಸದರಿಯವ ಸಹಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ **1**(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು.

**3.** ನಿಪಿ **1** ನ್ನು ಸುಜಾತರವರು ಬರೆದಿದ್ದು, ಸದರಿಯವರ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ **1**(ಡಿ) ಎಂದು ಗುರುತಿಸಲಾಯಿತು.

**4.** ಪ್ರತಿವಾದಿ ಮೂರು ಬಾರಿ ಬರೆದುಕೊಟ್ಟಿರುವ ಹಣ ಸಂದಾಯ ರಸೀದಿಗಳನ್ನು ನಿಪಿ **2, 3** ಮತ್ತು **4** ಎಂದು ಗುರುತಿಸಲಾಯಿತು.

**5.** ಪ್ರತಿವಾದಿಯ ಹೆಸರಿನಲ್ಲಿರುವ ಆರ್ ಟಿ ಸಿಯನ್ನು ನಿಪಿ **5,**

**6.** ಪ್ರತಿವಾದಿಗೆ ನೀಡಿರುವ ನೋಟೀಸಿನ ಪ್ರತಿಯನ್ನು ನಿಪಿ-**6,**

**7.** ಪ್ರತಿವಾದಿ ನೀಡಿರುವ ಪ್ರತ್ಯುತ್ತರವನ್ನು ನಿಪಿ-7 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಪುರಸ್ಕರಿಸಬೇಕೆಂದು ಕೋರುತ್ತೇನೆ.

ಪಾಟೀ ಸವಾಲುಃ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶಕೋರಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.